ಮಾತುಕತೆ

# ನಾನು ಹಿಡಿದಿರೋದು ಕನ್ನಡಗಳ ಬೋಗುಣಿ



**ಚೀಮನಹಳ್ಳಿ ರಮೇಶಬಾಬು**

ಚಿತ್ರಗಳು: ಡಿ.ಜಿ. ಮಲ್ಲಿಕಾರ್ಜುನ

ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಮಲಿಯಪ್ಪನಹಳ್ಳಿಯ ಸ. ರಘುನಾಥ (ಆಗಸ್ಟ್ 13, 1954), ಕೋಲಾರ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು ನಡೆಸಿದ ಜನಮುಖಿ ಪ್ರಯೋಗಗಳು ನಾಡಿಗೇ ಮಾದರಿಯಂತಿವೆ. ಕಥೆ, ಕಾವ್ಯ, ಕಾದಂಬರಿ, ಮಕ್ಕಳ ಸಾಹಿತ್ಯ, ಅನುವಾದ ಸೇರಿದಂತೆ ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಅವರು ಆಸಕ್ತರು. ಕೋಲಾರ ಸೀಮೆಯ ಬಹು ಭಾಷಿಕ ಪರಿಸರವನ್ನು ತಮ್ಮ ಮಾತು–ಕೃತಿಗಳಲ್ಲಿ ಒಡಮೂಡಿಸುವುದರಲ್ಲಿ ಪ್ರಯೋಗಶೀಲರು. ವೃತ್ತಿಯಿಂದ ಮೇಷ್ಟ್ರು, ನಿವೃತ್ತರು. ಸಮಾಜವನ್ನೇ ಶಾಲೆಯೆಂದು ಪರಿಗಣಿಸಿದ್ದರಿಂದ ಬಿಡುವು ಕಳೆದುಕೊಂಡವರು. ಬಡಮಕ್ಕಳು, ನಿರ್ಗತಿಕರು, ಭಿಕ್ಷುಕರು, ಅಂಗವಿಕಲರು, ವೃದ್ಧರು, ಪಶುಪಕ್ಷಿಗಳು – ದಾರಿಯಲ್ಲಿ ಎಡತಾಕಿದವರಿಗೆಲ್ಲ ಪ್ರೇಮ–ಸ್ನೇಹವನ್ನು ಹಂಚುವುದರಲ್ಲಿ ಬದುಕಿನ ಸಾರ್ಥಕತೆಯನ್ನು ಕಾಣುತ್ತಿರುವವರು. 'ನಮ್ಮ ಮಕ್ಕಳು' ಹಾಗೂ 'ಹಸಿರು ಹೊನ್ನೂರು' ರಘುನಾಥರ ಸಾಮಾಜಿಕ ಕಾಳಜಿಯ ಫಲವಾಗಿ ರೂಪುಗೊಂಡ ವಾತ್ಸಲ್ಯಪಥಗಳು. ಆರೋಗ್ಯಕರ ಸಮಾಜವನ್ನು ಹಂಬಲಿಸುತ್ತ ಪರಿಸರ ಸಂರಕ್ಷಣೆ ಚಟುವಟಿಕೆಗಳಲ್ಲೂ ಸಕ್ರಿಯರಾಗಿರುವ ರಘುನಾಥ, ಸದ್ಯಕ್ಕೆ ಬಳ್ಳಾರಿ ಕೇಂದ್ರಿತ ರೈತ ಚಳವಳಿ ಚಟುವಟಿಕೆಗಳೊಂದಿಗೆ ಗುರ್ತಿಸಿಕೊಂಡಿದ್ದಾರೆ. 'ಗತಿ', 'ಅಭಿಮುಖ', 'ದಾರಿ ಮತ್ತು ಆಕಾಶ', 'ಶಬ್ದ ಕಣ್ಣಿನ ನಡುವೆ', 'ಕೂಡು' (ಕಾವ್ಯ), 'ತಂಗಡಿ ಹುವ್ವ', 'ಬಿಸಿಲ ನೆಲ' (ಕಥೆಗಳು), 'ಹಬ್ಬದ ಸಂತೆ' (ಈವರೆಗಿನ ಕಥೆಗಳು), 'ಗನ್ನೇರಿ' (ಖಂಡ ಕಾವ್ಯ) ಹಾಗೂ 'ನರಸಿಂಗರಾಯ' (ಕಾದಂಬರಿ) ಅವರ ಕೆಲವು ಮುಖ್ಯ ಕೃತಿಗಳು. ಮುದ್ದಣ ಕಾವ್ಯ ಪ್ರಶಸ್ತಿ, ಕುವೆಂಪು ಭಾಷಾಭಾರತಿ ಪ್ರಾಧಿಕಾರ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ಶತಮಾನೋತ್ಸವ ಗೌರವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಸಂದೇಶ ವಿಶೇಷ ಪ್ರಶಸ್ತಿ, ಪು.ತಿ.ನ. ಕಾವ್ಯ ಪ್ರಶಸ್ತಿ, ಕರ್ನಾಟಕ ಸರ್ಕಾರದ ಪ್ರೊ. ಕೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳು ಅವರಿಗೆ ಸಂದಿವೆ. ತಮ್ಮ ವಿಶಿಷ್ಟ ವ್ಯಕ್ತಿತ್ವದಿಂದ ಕನ್ನಡ ಸಾಹಿತ್ಯ ಹಾಗೂ ಕನ್ನಡ ಸಮಾಜ ಎರಡಕ್ಕೂ ಕೊಡುಗೆ ನೀಡಿರುವ ಸ. ರಘುನಾಥ ಅವರೊಂದಿಗೆ **'ಮಯೂರ'**ಕ್ಕಾಗಿ ನಡೆಸಿದ ವಿಶೇಷ ಸಂದರ್ಶನವಿದು.